**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.**

**ಸಿ.ಸಿ. ನಂ.** 2422/2025

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ಶ್ರೀಧರ್ ವಸಂತ್ ಧರೆಣ್ಣನವರ್ | ಸಿ.ಡಬ್ಲ್ಯೂ–40 |
| ತಂದೆಯ ಹೆಸರು | : | ವಸಂತ್ | ಪಿ.ಡಬ್ಲ್ಯೂ–06 |
| ವಯಸ್ಸು | : | 35 ವರ್ಷ | |
| ಉದ್ಯೋಗ | : | ಪೊಲೀಸ್ ಪೇದೆ | |
| ವಾಸಸ್ಥಳ | : | ಚಳ್ಳಕೆರೆ | ದಿಃ 18–02–2026. |

**ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದಃ**

2017 ರಿಂದ ಇಲ್ಲಿಯವರೆಗೆ ನಾನು ಚಳ್ಳಕೆರೆ ಪೊಲೀಸ್ ಠಾಣೆಯಲ್ಲಿ ಪಿ.ಸಿ. ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 04.10.2025 ರಂದು ನನಗೆ ಹಾಗೂ ಚಾಸಾ–41 ರವರಿಗೆ ಚಾಸಾ–41 ರವರು ನಗರ ಗಸ್ತು ಕರ್ತವ್ಯಕ್ಕೆ ನೇಮಿಸಿ ಅನುಮಾನಾಸ್ಪದ ವ್ಯಕ್ತಿಗಳನು ಕರೆ ತರಲು ಸೂಚಿಸಿದ ಮೇರೆಗೆ ನಾನು ಮತ್ತು ಚಾಸಾ–41 ರವರು ನಗರ ಗಸ್ತು ಮಾಡಲು ನೆಹರು ಸರ್ಕಲ್ ನಿಂದ ರಹೀಂ ನಗರ, ರಹೀಂ ನಗರದಿಂದ ನಾಯಕನಹಟ್ಟಿ ಕ್ರಾಸ್ ನಲ್ಲಿ ಗಸ್ತು ಕರ್ತವ್ಯದಲ್ಲಿದ್ದಾಗ ಮೋಟಾರ್ ಸೈಕಲ್ ನಲ್ಲಿದ್ದ ಒಬ್ಬ ಆಸಾಮಿ ನಮ್ಮನ್ನು ನೋಡಿ ಮರೆ ಮಾಚಿಕೊಳ್ಳಲು ಪ್ರಯತ್ನಿಸಿರುತ್ತಾನೆ, ಆತನನ್ನು ವಿಚಾರಿಸಿದಾಗ ಸರಿಯಾದ ಮಾಹಿತಿ ತಿಳಿಸಿರುವುದಿಲ್ಲ. ಸದರಿ ಆಸಾಮಿಯ ಬಳಿ ಇದ್ದ ಕೆಎ–16 ಇಕೆ–7690 ಮೋಟಾರ್ ಬೈಕ್ ನ ದಾಖಲೆಗಳನ್ನು ಕೇಳಿದಾಗ ಮಾರನೇ ದಿನ ಹಾಜರು ಪಡಿಸುವುದಾಗಿ ಹೇಳಿರುತ್ತಾನೆ. ತದ ನಂತರ ಆತನನ್ನು ಚಾಸಾ–45 ರವರ ಸಮ್ಮುಖ ಹಾಜರು ಪಡಿಸಿರುತ್ತೇನೆ. ಚಾಸಾ–45 ರವರು ಆತನನನ್ನು ವಿಚಾರಣೆ ಮಾಡಿದಾಗ ಮಹಮ್ಮದ್ ಷರೀಫ್ ತಂದೆ ಪಿರನ್ ಸಾಬ್, ಆಜಾದ್ ನಗರ , ಹಿರಿಯೂರು ಪಟ್ಟಣ ಎಂದು ತಿಳಿಸಿ ವಾಹನದ ದಾಖಲಾತಿಯನ್ನು ನಾಳೆ ಹಾಜರು ಪಡಿಸುವುದಾಗಿ ಹೇಳಿ ಹೋಗಿರುತ್ತಾನೆ.

ದಿನಾಂಕ 05.10.2025 ರಂದು ಚಾಸಾ–45 ರವರು ಆರೋಪಿ ಬಳಿ ಇದ್ದ ಕೆಎ–16 ಇಕೆ –7690 ವಾಹನ ಠಾಣಾ ಮೊಕದ್ದಮೆ ಸಂಖ್ಯೆ 377/2025 ಮೊಕದ್ದಮೆಗೆ ಸಂಬಂಧಿಸಿದ್ದರಿಂದ ಸದರಿ ಆಸಾಮಿಯನ್ನು ಪತ್ತೆ ಮಾಡಿಕೊಂಡು ಬರಲು ನಮ್ಮನ್ನು ನೇಮಿಸಿದ್ದರು. ನಾನು ಮತ್ತು ಚಾಸಾ–41 ರವರು ಬಾತ್ಮಿದಾರರಿಂದ ಬಂದ ಮಾಹಿತಿ ಮೇರೆಗೆ ಆರೋಪಿಯನ್ನು ಬಳ್ಳಾರಿ ರಸ್ತೆಯ

ಬಳಿ ಹಿಡಿದು ಚಾಸಾ-45 ರ ಮುಂದೆ ಹಾಜರು ಪಡಿಸಿರುತ್ತೇವೆ. ಈ ಬಗ್ಗೆ ನಾನು ತನಿಖಾಧಿಕಾರಿಗಳಿಗೆ ಹೇಳಿಕೆಯನ್ನು ನೀಡಿರುತ್ತೇನೆ.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ನಿಪಿ.5 ಮತ್ತು 6 ರಲ್ಲಿರುವ ವಾಹನಗಳನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಟಿ.ಎಸ್.ಎನ್., ಆರೋಪಿ ಪರ ವಕೀಲರಿಂದಃ**

ನನಗೂ ಹಾಗೂ ಚಾಸಾ-41 ರವರನ್ನು ಗಸ್ತು ಕರ್ತವ್ಯಕ್ಕೆ ನೇಮಿಸಿದ ಬಗ್ಗೆ ಠಾಣಾ ದಿನಚರಿಯಲ್ಲಿ ನಮೂದಿಸಿರುವುದಿಲ್ಲ. ನಾವು ಗಸ್ತು ಮಾಡಿದ ಸ್ಥಳಗಳ ಬಗ್ಗೆ ಠಾಣಾ ದಿನಚರಿಯಲ್ಲಿ ನಮೂದಿಸಿರುವುದಿಲ್ಲ. ದಿನಾಂಕ 04.10.2025 ರಂದು ಠಾಣೆಯನ್ನು ಬೆಳಿಗ್ಗೆ 10-00 ಗಂಟೆಗೆ ಬಿಟ್ಟಿರುತ್ತೇವೆ. ನಂತರ ಮದ್ಯಾಹ್ನ ಊಟ ಮುಗಿಸಿದ ನಂತರ ನೆಹರೂ ಸರ್ಕಲ್ ಗೆ ಗಸ್ತು ಕರ್ತವ್ಯಕ್ಕೆ ಹೋಗಿರುತ್ತೆವೆ. ನಮ್ಮ ಠಾಣೆಯಿಂದ ನೆಹರೂ ಸರ್ಕಲ್ ಗೆ 5 ನಿಮಿಷದಲ್ಲಿ ಪ್ರಯಾಣಿಸಬಹುದು ಎಂದರೆ ಸರಿ. ಠಾಣೆಯಿಂದ ನಾವು ನೇರವಾಗಿ ನೆಹರೂ ಸರ್ಕಲ್ ಗೆ ಹೋಗಿರುವುದಿಲ್ಲ ಎಂದರೆ ಸರಿ. ನಮ್ಮನ್ನು ನೋಡಿ ಒಬ್ಬ ವ್ಯಕ್ತಿ ಮರೆ ಮಾಚಿಕೊಳ್ಳಲು ಪ್ರಯತ್ನಿಸಿದ್ದು ಆತನನ್ನು ನಾವು ವಿಚಾರಿಸಿರುತ್ತೇವೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿಯ ಬಳಿ ಕೆಎ-16 ಇಕೆ -7690 ಮೋಟಾರ್ ಬೈಕ್ ಇತ್ತು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ.

ದಿನಾಂಕ 04.10.2025 ರಂದು ಆರೋಪಿಯನ್ನು ಚಾಸಾ-45 ರವರ ಮುಂದೆ ಹಾಜರು ಪಡಿಸಿರುತ್ತೇವೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿಯು ಮಾರನೇ ದಿನ ವಾಹನಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರು ಪಡಿಸುವುದಾಗಿ ಹೇಳಿರುತ್ತಾನೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿಯ ಮನೆಯ ಹತ್ತಿರ ಹೋಗಿ ವಿಚಾರಿಸಿರುವುದಿಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಈ ಪ್ರಕರಣದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನಾನು ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ